ಶ್ರೀ ಈ. ತುಕಾರಾಂ:– ಮಾನ್ಯ ಅಧ್ಯಕ್ಷರೆ, ಇವರಿಗೆಲ್ಲಾ ತುಂಬಾ ಅನ್ಯಾಯವಾಗಿದೆ, ದಯಮಾಡಿ ಇವರಿಗೆಲ್ಲರಿಗೂ ನ್ಯಾಯ ಒದಗಿಸಿಕೊಡಬೇಕು. ಈ ಬಗ್ಗೆ ಸರ್ಕಾರ ಉತ್ತರ ಕೊಡಬೇಕು.

ಅಧ್ಯಕ್ಷರು:– ಆಯಿತು.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಮಾನ್ಯ ವಿಧಾನ ಸಭಾ ಸದಸ್ಯರುಗಳಾದ ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ ಮತ್ತು ಶ್ರೀ ಈ. ತುಕಾರಾಂ ಅವರುಗಳು ನಿಯಮ 73ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಮುಖ್ಯ ಮಂತ್ರಿಯವರ ಹೇಳಿಕೆ

ಮಾನ್ಯ ಅಧ್ಯಕ್ಷರೆ ಯಶವಂತಪುರ ಹೋಬಳಿ, ಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ: 31ರ ಪೈಕಿ 4–00 ಎಕರೆ ಜಮೀನನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 196 ಎಸ್‌ಪಿಕ್ಯೂ 1998, ದಿನಾಂಕ: 08.05.2003ರಂತೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಸದರಿ 4–00 ಎಕರೆ ಜಮೀನನ್ನು ಕಂದಾಯ ದಾಖಲೆ ಪ್ರಕಾರ ಭೂಮಾಲೀಕರ ಹೆಸರನ್ನು ಅಧಿಸೂಚನೆಯಲ್ಲಿ ತಂದಿದ್ದು, ಐತೀರ್ಪು ರಚಿಸಿ, ಪರಿಹಾರ ಪಾವತಿಸುವ ಸಮಯದಲ್ಲಿ ಸದರಿ ಭೂ ಮಾಲೀಕರು ನಿವೇಶನಗಳನ್ನು ವಿಂಗಡಿಸಿ, ಮಾರಾಟ ಮಾಡಿರುವುದಾಗಿ, ಸದರಿ ನಿವೇಶನಗಳನ್ನು ಖರೀದಿಸಿರುವ ಖರೀದಿದಾರರು ತಮ್ಮ ಆಕ್ಷೇಪಣೆಗಳನ್ನು ಕಛೇರಿಗೆ ಸಲ್ಲಿಸಿದ್ದು, ಈ ಹಂತದಲ್ಲಿ ಪ್ರಕರಣದ ವಿಚಾರಣೆ ನಡೆಸಿ ನಿವೇಶನ ಖರೀದಿದಾರರು ನೀಡಿರುವ ಆಕ್ಷೇಪಣೆಗಳೊಂದಿಗೆ ಸದರಿ ದಾಖಲೆ ವಿವರವನ್ನು ನಮೂದಿಸಿ, ಅವಾರ್ಡ್ ಆದೇಶ ಮಾಡಿ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದೆ.

ಐತೀರ್ಪು ರಚಿಸಿ, ದಿನಾಂಕ: 09.10.2006ರಲ್ಲಿ ಪರಿಹಾರದ ಮೊಬಲಗನ್ನು ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಠೇವಣಿ ಇಡಲಾಗಿದೆ ಹಾಗೂ ದಿನಾಂಕ: 06.05.2004ರಲ್ಲಿ ಸದರಿ ಜಮೀನನ್ನು ಯೋಜನಾ ಪ್ರವರ್ತಕರಿಗೆ ಮಂಡಳಿಯಿಂದ ಹಸ್ತಾಂತರಿಸಲಾಗಿದೆ.

ಸದರಿ ಜಮೀನನ್ನು ಭೂಸ್ವಾಧೀನಪಡಿಸುವ ಸಮಯದಲ್ಲಿ ಕಂದಾಯ ದಾಖಲೆ ಪಹಣಿಯಂತೆ ಭೂ ಮಾಲೀಕರಾದ ಶ್ರೀಮತಿ ಸಂಗಮ್ಮ, ಶ್ರೀ ಕೆ.ಸಿ. ಉಮಾಪತಯ್ಯ ಮತ್ತು ಶ್ರೀ ಸುರೇಶ್ ಎಂಬುವರು ಖಾತೇದಾರರಾಗಿದ್ದು, ಇವರ ಹೆಸರುಗಳನ್ನು ಒಳಗೊಂಡಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸದರಿ ಭೂ ಮಾಲೀಕರು ಭೂ ಪರಿವರ್ತನೆಗೊಳಿಸದೇ ಕಂದಾಯ ನಿವೇಶನಗಳನ್ನು ವಿಂಗಡಿಸಿ ಹಂಚಿರುತ್ತಾರೆ.

ಈ ಜಮೀನಿಗೆ 2003ನೇ ಸಾಲಿನಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದು, 2004ನೇ ಸಾಲಿನಲ್ಲಿ ಹಸ್ತಾಂತರಿಸಲಾಗಿರುತ್ತದೆ. ದಿನಾಂಕ: 09.10.2006ರಂದು ಪರಿಹಾರದ ಮೊಬಲಗನ್ನು ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಠೇವಣಿ ಮಾಡಲಾಗಿರುತ್ತದೆ. ಈ ಜಮೀನಿಗೆ ಭೂ ಪರಿಹಾರ ಪಾವತಿಸಲು ಸಾಧ್ಯವಾಗದ ಕಾರಣ, ಆಕ್ಷೇಪಣೆದಾರರ ಪಟ್ಟಿಯೊಂದಿಗೆ ಐತೀರ್ಪು ರಚಿಸಿ. ಪ್ರಿನ್ಸಿಪಲ್ ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ)ರವರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇಲ್ಲಿ ಠೇವಣಿ ಇಡಲಾಗಿದೆ. ಸದರಿ ನ್ಯಾಯಾಲಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ LAC 82/2006 ದಾಖಲಾಗಿದ್ದು, ವಿಚಾರಣೆ ಹಂತದಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಈ. ತುಕಾರಾಂರವರು ಪ್ರಸ್ತಾಪ ಮಾಡಿರುವ ವಿಷಯ ಸರ್ಕಾರದ ಗಮನದಲ್ಲಿದೆ. ಅವರು ಇಲ್ಲಿ ಏನು ಅನ್ಯಾಯ ಆಗಿದೆ ಎಂಬ ವಿಚಾರವನ್ನು ಏನು ಹೇಳುತ್ತಿದ್ದಾರೆ, ಅದನ್ನು ಸರಿಪಡಿಸಿಕೊಡುವಂಥದಕ್ಕೆ ಗಮನಕೊಡುತ್ತೇವೆ.

ಅಧ್ಯಕ್ಷರು:– ಈ ವಿಷಯವಾಗಿ ಸ್ವಲ್ಪ ಗಮನ ಕೊಡಿ, ತಾವು ಗಮನಕ್ಕೆ ಬಂದಿದೆಯೆಂದು ಹೇಳಿ ಸುಮ್ಮನೆ ಕುಳಿತು ಬಿಟ್ಟರೆ ಆಯಿತೇ? Take them seriously. ಇಲ್ಲಿ ಹಳೆಯ ರೀತಿಯಲ್ಲೇ ಉತ್ತರವನ್ನು ಹೇಳುತ್ತಾ ಇದ್ದರೆ, ಕೇಳುವವರು ಯಾರು?

ಶ್ರೀ ಈ. ತುಕಾರಾಂ:– ಮಾನ್ಯ ಅಧ್ಯಕ್ಷರೆ, ಎಲ್ಲಾ register ಮಾಡಿ, ನೋಂದಾಯಿಸಿದ್ದಾರೆ. ಇದನ್ನೆಲ್ಲಾ privateನವರಿಗೆ ಮಾರಾಟ ಮಾಡಿ ಅನ್ಯಾಯ ಮಾಡಿದ್ದಾರೆ. ಇದಕ್ಕೆ ನ್ಯಾಯ ಸಿಗಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ವಿಷಯ ಮಾನ್ಯ ಮುಖ್ಯಮಂತ್ರಿಯವರ ಖಾತೆಗೆ ಬರುವಂಥದ್ದು, ಅವರು ಉತ್ತರ ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಬಯಸಿದರೆ, ನಾಳೆ ಇನ್ನೊಂದು ಸಾರಿ ಉತ್ತರ ಕೊಡಿಸುವಂಥ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು:– ನಾಳೆ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದಾಗ ಕೇಳಿ, ಹೇಳುತ್ತಾರೆ.

ಶ್ರೀ ಈ. ತುಕಾರಾಂ:– ಮಾನ್ಯ ಅಧ್ಯಕ್ಷರೆ, ಆಯಿತು, ಧನ್ಯವಾದಗಳು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇವತ್ತು suo motu ಉತ್ತರವನ್ನು ಕೊಡಬೇಕಾಗಿತ್ತು, ಒಂದು statement ಮಾಡಬೇಕಾಗಿತ್ತು.

ಅಧ್ಯಕ್ಷರು:– ನಾಳೆ ಹೇಳುತ್ತೇನೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಇವತ್ತು ಕೊಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಗ್ಯಾಸ್ ಇಲ್ಲವೆಂದರೆ ಊಟವಿಲ್ಲ.

(ಗೊಂದಲ)

ಅಧ್ಯಕ್ಷರು:– ಈಗಾಗಲೇ ಸಂಜೆ 6.45 ಗಂಟೆಯಾಗಿದೆ, ಯಾರಾದರೂ ಮಂತ್ರಿಗಳು ಉತ್ತರ ಹೇಳುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾಳೆ ಕೊಡಿಸೋಣ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಇಂಥ ಮಹತ್ವವಾದ ವಿಚಾರ ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ. ಸರ್ಕಾರ ನಿದ್ದೆ ಮಾಡುತ್ತಿದೆಯೇ? ಸರ್ಕಾರ ಏನು ಮಾಡುತ್ತಿದೆ? ಸರ್ಕಾರ ಹೇಳಬೇಕಾಗಿತ್ತು, ಸಾರ್ವಜನಿಕರಿಗೆ ಸಿಲಿಂಡರ್ ವ್ಯವಸ್ಥೆ ಮಾಡುತ್ತೇವೆಂದು ಭರವಸೆ ಕೊಡಬೇಕಾಗಿತ್ತು. ಏನು ಮಾಡಿದ್ದೀರಿ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಗೊತ್ತಿಲ್ಲ, ಗಮನಕ್ಕೆ ಬಂದಿಲ್ಲವೆಂದಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಗೊತ್ತಿಲ್ಲವೆಂದಲ್ಲ ಎಂದರೆ, ಮಾಡಿದ್ದು ಏನು? ಸಾರ್ವಜನಿಕರಿಗೆ ಉತ್ತರ ಹೋಗಬೇಕಲ್ಲಾ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈಗ ಸಚಿವ ಸಂಪುಟ ಸಭೆ ಇದೆ, ಅಲ್ಲಿ ಪ್ರಸ್ತಾಪ ಮಾಡಿ, ಇವತ್ತೇ ಒಂದು ಸಂದೇಶವನ್ನು ರವಾನೆ ಮಾಡುತ್ತೇವೆ.

ಶ್ರೀ ವಿ. ಸುನೀಲ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಅವರ ಬೇಡಿಕೆ ಏನಿದೆ, ಅದನ್ನು ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾವು ಈ ವಿಷಯವನ್ನು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದಲ್ಲ, ಜನರಿಗೆ ಭರವಸೆ ಕೊಡಬೇಕು.

ಅಧ್ಯಕ್ಷರು:– ಆಯಿತು, ಅವರಿಗೆ ಕಾಲಾವಕಾಶ ಬೇಡವೇ? ಹಾಗೆ ಹೇಳುವುದಕ್ಕೆ ಆಗುತ್ತದೆಯೇ? ಈಗ ನಿಯಮ 69ರ ಅಡಿಯಲ್ಲಿ ಎರಡು ವಿಷಯಗಳು ಚರ್ಚೆಗೆ ಇತ್ತು. ಅವರಿಗೆ ಸಚಿವ ಸಂಪುಟ ಸಭೆ ಇರುವುದರಿಂದ ಈ ವಿಷಯಗಳನ್ನು ನಾಳೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ಸರ್ಕಾರ ಗ್ಯಾಸ್ ವಿಷಯವಾಗಿ ಒಂದು statement ಕೊಡಬೇಕು.

ಅಧ್ಯಕ್ಷರು:– ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 47 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 25ನೇ ಫೆಬ್ರವರಿ, 2014ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅರಣ್ಯ ಇಲಾಖೆ ಯೋಜನೆಗಳು

2010(2197); ಶ್ರೀ ಐಹೊಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರಾಯಭಾಗ ವಿಧಾನಸಭಾ ಕ್ಷೇತ್ರದಲ್ಲಿ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ವತಿಯಿಂದ ಅನುಷ್ಠಾನ ಮಾಡಿದ ಯೋಜನೆಗಳಾವುವು; ಅವುಗಳಿಗೆ ವೆಚ್ಚ ಮಾಡಿದ ಹಣವೆಷ್ಟು; (ಯೋಜನಾವಾರು ವಿವರ ಒದಗಿಸುವುದು)

ಆ) ಸದರಿ ಕ್ಷೇತ್ರದಲ್ಲಿ ಇಲಾಖೆಗಳ ವತಿಯಿಂದ ಹಮ್ಮಿಕೊಳ್ಳಲು ಉದ್ದೇಶಿಸಿರುವ ಯೋಜನೆಗಳಾವುವು; ಅವುಗಳಿಗೆ ಮೀಸಲಿಟ್ಟ ಹಣವೆಷ್ಟು? (ಯೋಜನಾವಾರು ವಿವರ ಒದಗಿಸುವುದು)